ಫಾರೆಸ್ಟ್ ಇಲಾಖಾ.

ಇನ್ವಿಹಾರ್ನಾಮಾ, ತಾರೀಖು 15ನೆ ಏಪ್ರೆಲ್ 1909.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ :—ಈ ಕೆಳಗೆ ಕಂಡ ಡಿಪೋಗಳಲ್ಲಿ ಚಾಬೀನಾವನ್ನು ಸದರಿ ಡಿಪೋಗಳ್ಹತ್ತಾಜುದಲ್ಲಿ ನಮೂದಿಸಿರುವ ತಾರೀಖುಗಳಲ್ಲಿ ಬಹಿರಂಗವಾಗಿ ಮೈಸೂರು ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರವರಂದ ಸರಾಜು ಮೂಲಕ ವಿಕ್ರಯಿಸಲ್ಪಡುತ್ತೆ.

ನಂ.	ಡಿಪೋಗಳ ಹೆಸರು.	ಹರಾಜು ತಾರೀಖು.	ನಾಟುಗಳ ವಿವರ.	ಸಲೆ ಅಡಿ.		ಪರಾ.
				ನಂಬರ್.	ಅಡಿ.	
1	ಮೈಸೂರು ಉಡ್ಯಾರ್ಡ್.	19—5—09	ಸಾಗ್ವಾನಿ ನಾಟೂ ...	600	20,000	ಹೆಜ್ಜೆ ಕಡಿನು
			ಡಿಟೋ ಜಂತಿಗಳು ...	300	4,000	
			ಹೊನ್ನೆ ನಾಟೂ ...	100	2,500	
			ಡಿಟೋ ಜಂತಿಗಳು ...	50	500	
			ಮತ್ತಿ ನಾಟೂ	100	3,000	
			ಡಿಟೋ ಜಂತಿಗಳು ...	75	500	
			ಬೀಟೆ ನಾಟೂ ...	25	1,000	
			ಕಾಡು ನಾಟೂ ...	25	500	
2	ನಂಜನಗೂಡು ...	20—5—09	ಸಾಗುವಾನಿ ನಾಟೂ ...	50	1,500	
			ಡಿಟೋ ಜಂತಿಗಳು ...	50	500	
			ಹೊನ್ನೆ ನಾಟೂ ...	100	2,000	
			ಡಿಟೋ ಜಂತಿಗಳು ...	50	500	
			ಮತ್ತಿ ನಾಟೂ ...	50	1,000	
			ಡಿಟೋ ಜಂತಿಗಳು ...	10	120	
			ಬೀಟೆ ನಾಟೂ ...	25	600	
			ಡಿಟೋ ಜಂತಿಗಳು ...	50	500	
			ಕಾಡು ನಾಟೂ ...	20	500	

ಹರಾಜು ಷರತ್ತುಗಳು.

1. ಚಡ ದರಖಾಸ್ತುದಾರನು ಹರಾಜು ಆದ 3 (ಮೂರು) ದಿವಸಗಳೊಳಗಾಗಿ ಹರಾಜು ಮೊಬಲಗು ಪೈಕಿ ಶೇಕಡ 25 ರಂತೆ ಆಗುವ ಮೊಬಲಗನ್ನು ಹತ್ತರವಿರುವ ಖಜಾನೆಗೆ ಕಟ್ಟತಕ್ಕದ್ದು. ಹಾಗೆ ಮಾಡದೆ ತಪ್ಪಿದಲ್ಲಿ ಮೂಲನ್ನು ದುಸರಾ ಹರಾಜು ಮಾಡಿ ಅದರಿಂದುಂಟಾಗುವ ನಷ್ಟಕ್ಕೆ ಅವನನ್ನು ಗುರಿಪಡಿಸುತ್ತೆ.
2. ಖರೀದಿ ಮೊಬಲಗು ಪೈಕಿ ಉಳಿದ ಮೊಬಲಗನ್ನು ಹರಾಜು ತಾರೀಖು ಲಾಗಾಯಿತು 30 ದಿವಸಗಳಲ್ಲಿ ಪಾವತಿ ಮಾಡತಕ್ಕದ್ದು. ಇದಕ್ಕೆ ತಪ್ಪಿದಲ್ಲಿ ಇದಕ್ಕೆ ಮೊದಲೇ ಕಟ್ಟಿರುವ ಡಿಪಾಜಿಟ್ ಮೊಬಲಗು ಸರಕಾರಕ್ಕೆ ದಂಡವಾಗಿ ಕೇರಿಸಿಕೊಳ್ಳಲ್ಪಡುತ್ತೆ. ಮತ್ತು ಲಾಟ್ ಮರಗಳನ್ನು 1ನೆ ಪ್ಯಾರಾದಲ್ಲಿ ಹೇಳಿರುವ ಪ್ರಕಾರ ದುಸರಾ ಹರಾಜು ಮಾಡಲ್ಪಡುತ್ತೆ.
3. ತಾನು ಹರಾಜಿನಲ್ಲಿ ಪಡದಿರುವ ಚಪ್ಪುಬೀನಾ ಕಿಮ್ಮತ್ತು ಪೂರ್ತಿ ಪಾವತಿ ಮಾಡದೆಯೂ ಮತ್ತು ಸದರಿ ಚಪ್ಪುಬೀನಾವನ್ನು ಸಾಗಿಸುವದಕ್ಕೆ ರಹದಾರಿ ಪಡೆಯದೆಯೂ ಮೂಲನ್ನು ರಫ್ತು ಮಾಡಕೂಡದು.
4. ಹರಾಜು ತಾರೀಖು ಲಾಗಾಯಿತು 90 ದಿವಸಗಳ ಮೇಲ್ಪಟ್ಟು ಮರಗಳನ್ನು ಡಿಪೋಯಿಂದ ಸಾಗಿಸದೆ ಇದ್ದಲ್ಲಿ ಹರಾಜು ತಾರೀಖು ಲಾಗಾಯಿತು ಖರೀದಿ ಮೊಬಲಗಿನ ಮೇಲೆ ವರ್ಷ ಬಂದಕ್ಕೆ ಶೇಕಡ ಬಂದಕ್ಕೆ 12 ರೂಪಾಯಿನ ಮೇರೆ ಡಿಪೋ ಭಾಡಾ ವಸೂಲು ಮಾಡಲಾಗುತ್ತೆ.

ಎಂ. ಜಿ. ರಾಮರಾವ್, ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರ್, ಮೈಸೂರು ಡಿಸ್ಟ್ರಿಕ್ಟ್.

ಪ್ರಕಟನೆ.

ಬೆಂಗಳೂರು ಡಿಸ್ಟ್ರಿಕ್ಟ್ ಕಾನಕಾನಹಳ್ಳಿ ತಾಲ್ಲೂಕು ಮಂಜನಾಥ ರಿಜರ್ವನ್ನು ಮನ್ನಾ ಜಂಗಲಿ ಮಾಡತಕ್ಕ ವಿಷಯದಲ್ಲಿ ಸ|| 1909ನೆ ಇಸವಿ ಏಪ್ರೆಲ್ ತಾರೀಖು 22ನೆ ಕನ್ನಡ ಮೈಸೂರು ಗೆಜೆಟ್ 2ನೆ ಭಾಗದ 249—250ನೆ ಪುಟಗಳಲ್ಲಿ ವಿಶದವಾಗಿ ತಿಳಿದುಕೊಳ್ಳಬಹುದು.

ಬೆಂಗಳೂರು ಡಿಸ್ಟ್ರಿಕ್ಟ್ ಕಾನಕಾನಹಳ್ಳಿ ತಾಲ್ಲೂಕು ಅಚ್ಚಲ್ ರಿಜರ್ವನ್ನು ಮನ್ನಾ ಜಂಗಲಿ ಮಾಡತಕ್ಕ ವಿಷಯದಲ್ಲಿ ಸ|| 1909ನೆ ಇಸವಿ ಏಪ್ರೆಲ್ ತಾರೀಖು 22ನೆ ಕನ್ನಡ ಮೈಸೂರು ಗೆಜೆಟ್ 2ನೆ ಭಾಗದ 251—252ನೆ ಪುಟಗಳಲ್ಲಿ ವಿಶದವಾಗಿ ತಿಳಿದುಕೊಳ್ಳಬಹುದು.

ಶಿವಮೊಗ್ಗ ಡಿಸ್ಟ್ರಿಕ್ಟ್ ಸಾಗರ, ಸೊರಬ ಮತ್ತು ಶಿಕಾರಿಪುರ ತಾಲ್ಲೂಕುಗಳಲ್ಲಿರುವ ಮೈಸಾವಿ ಫಾರೆಸ್ಟನ್ನು ಮನ್ನಾ ಜಂಗಲಿ ಮಾಡತಕ್ಕ ವಿಷಯದಲ್ಲಿ ಸ|| 1909ನೆ ಇಸವಿ ಏಪ್ರೆಲ್ 22ನೆ ಕನ್ನಡ ಮೈಸೂರು ಗೆಜೆಟ್ 2ನೆ ಭಾಗದ 252-253-254ನೆ ಪುಟಗಳಲ್ಲಿ ವಿಶದವಾಗಿ ತಿಳಿದುಕೊಳ್ಳಬಹುದು.

ಚಿತ್ರದುರ್ಗ ಡಿಸ್ಟ್ರಿಕ್ಟ್ ಹಿರಿಯೂರು ತಾಲ್ಲೂಕು ಮಸ್ಕಲ್ ಫಾರೆಸ್ಟನ್ನು ಮನ್ನಾ ಜಂಗಲಿ ಮಾಡತಕ್ಕ ವಿಷಯದಲ್ಲಿ ಸ|| 1909ನೆ ಇಸವಿ ಏಪ್ರೆಲ್ ತಾರೀಖು 22ನೆ ಕನ್ನಡ ಮೈಸೂರು ಗೆಜೆಟ್ 2ನೆ ಭಾಗದ 255—256ನೆ ಪುಟಗಳಲ್ಲಿ ವಿಶದವಾಗಿ ವಿವರಿಸಲ್ಪಟ್ಟಿರುತ್ತೆ.

ಎಂ. ಶಾಮರಾವ್, ಫಾರೆಸ್ಟ್ ಸೆಟ್ಲ್‌ಮೆಂಟ್ ಆಫಿಸರ್ ಇ|| ಮೈಸೂರು.